# ಬುಡಕಟ್ಟು ಜನರ ಬದುಕು– ಸಂಸ್ಕೃತಿ ಅನಾವರಣ

**ಕೆ.ಸಿ.ಮಹದೇವಶೆಟ್ಟಿ**

ಭಾರತಕ್ಕೆ ಐದು ಸಾವಿರ ವರ್ಷಗಳ ಇತಿಹಾಸವಿದೆ. ಸಿಂಧು ನಾಗರಿಕತೆಯಿಂದ ಇಲ್ಲಿಯವರೆಗೆ ಅಸಂಖ್ಯಾತ ಬುಡಕಟ್ಟು ಸಮುದಾಯಗಳು ತನ್ನ ಪ್ರಾದೇಶಿಕ ನೆಲೆಯಲ್ಲಿ ತಮ್ಮ ಸಂಸ್ಕೃತಿಯ ಉಳಿವು ಮತ್ತು ಅವುಗಳ ಬೆಳವಣಿಗೆಗಾಗಿ ಶ್ರಮಿಸಿವೆ.

ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ನೇಪಾಳ, ಭೂತಾನ್ ದೇಶಗಳ ಗಡಿಭಾಗದಲ್ಲಿರುವ ಸಮುದಾಯಗಳು ವಿಭಜನೆ, ಯುದ್ಧ, ಆಂತರಿಕ ವೈರುಧ್ಯ, ಜನಾಂಗೀಯ ತಿಕ್ಕಾಟ, ಯಾಂತ್ರೀಕರಣ, ಜಾಗತೀಕರಣ, ಆಧುನಿಕತೆಯ ಘರ್ಷಣೆಗಳಿಂದಾಗಿ ತನ್ನ ಅಸ್ತಿತ್ವ ಮತ್ತು ಮೂಲ ಸಂಸ್ಕೃತಿಯ ಉಳಿವಿನ ಹೋರಾಟ ನಿರಂತರವಾಗಿ ನಡೆದು ಬಂದಿದೆ. ಭಾರತದ ಗಡಿಭಾಗದ ಬುಡಕಟ್ಟು ಜನಾಂಗಗಳ ವಾಸ್ತವ ಬದುಕು ಮತ್ತು ವಲಸೆಯ ಬಗ್ಗೆ ಸೆರೆಹಿಡಿದಿರುವ ಛಾಯಾಚಿತ್ರಗಳ ಪ್ರದರ್ಶನವು ನಗರದ ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿಯಲ್ಲಿ ಅನಾವರಣಗೊಂಡಿದೆ.

ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ ಮತ್ತು ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಆಶ್ರಯದಲ್ಲಿ 'ಸಿಮಂತ' ಶೀರ್ಷಿಕೆಯಡಿ ಟ್ರಾನ್ಸ್– ಬಾರ್ಡರ್ ಕಮ್ಯುನಿಟಿಸ್ ಅಂಡ್ ಕಲ್ಚರ್ಸ್ ಇನ್ ಏಷ್ಯಾ ಎಂಬ ವಿಶಿಷ್ಟವಾದ ಮಾಹಿತಿಸಹಿತ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಮಣಿಪುರದ ಇಂಫಾಲ್‌ನ ಮುತುವಾ ಮ್ಯೂಸಿಯಂ ಮತ್ತು ಭೂಪಾಲ್‌ನ ಮುಖ್ಯ ಕಚೇರಿಯಿಂದ ತಂದಿರುವ ಈ ಛಾಯಾಚಿತ್ರಗಳು ಕಲೆ, ಇತಿಹಾಸ, ಬುಡಕಟ್ಟು, ಜಾನಪದ, ಸಂಸ್ಕೃತಿ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವವರಿಗೆ, ಆಸಕ್ತರಿಗೆ, ಕಲಾ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಛಾಯಾಚಿತ್ರ ಪ್ರದರ್ಶನ ಇದಾಗಿದೆ ಎನ್ನುತ್ತಾರೆ ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದ ಪ್ರಾದೇಶಿಕ ಮುಖ್ಯಸ್ಥರಾದ ವಿಜಯಮೋಹನ್.



ಇದೆ ಆ.30 ರವರೆಗೆ ಪ್ರದರ್ಶನವಿದೆ.

ಆರ್ಯರ ಆಗಮನ, ದ್ರಾವಿಡರ ಚದುರುವಿಕೆ, ಮುಸ್ಲಿಂ, ಫ್ರೆಂಚ್, ಡಚ್, ಪೋರ್ಚುಗೀಸ್, ಬ್ರಿಟಿಷ್‌ರ ಆಗಮನದಿಂದಾಗಿ ಭಾರತದ ಸಂಸ್ಕೃತಿಯ ಮೇಲೆ ಅಗಾಧವಾದ ಒತ್ತಡಗಳಿಂದ ಬದಲಾವಣೆಗಳಾದವು. ಸ್ಥಳೀಯ ತಳ ಸಮುದಾಯಗಳ ಸಂಸ್ಕೃತಿಗಳು ಕಣ್ಮರೆಗೊಂಡವು; ಮಿಶ್ರಣಗೊಂಡವು. ನಾಗರಿಕ ಪ್ರಪಂಚದಿಂದ ದೂರ ಉಳಿದ ಅದೆಷ್ಟೋ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯು ಇಂದು ಸಹ ನೈಜತೆಯನ್ನು ಉಳಿಸಿಕೊಂಡಿವೆ.

ಭಾರತದ ಈಶಾನ್ಯ ಮತ್ತು ವಾಯವ್ಯ ಗಡಿನಾಡಿನ ರಾಷ್ಟ್ರಗಳಾದ ಬರ್ಮಾ, ಭೂತಾನ್ ಮತ್ತು ಬಾಂಗ್ಲಾ ದೇಶಗಳೊಂದಿಗೆ ಅರುಣಾಚಲ ಪ್ರದೇಶ, ಅಸ್ಸಾಂ, ನಾಗಾಲೆಂಡ್, ಮಿಜೋರಾಂ, ಮಣಿಪುರ, ತ್ರಿಪುರ, ಸಿಕ್ಕಿಂ, ಪಶ್ಚಿಮ ಬಂಗಾಳದ ಭಾಗಗಳಲ್ಲಿ ಕೊನ್ಯಾಕ್ ನಾಗ, ತಾಂಗ್ಯ, ನೊಕ್ಟ್ಸ್, ವಾಂಗ್ಜೋಸ್, ತಾಂಖುಲ್ ನಾಗ, ಮೈಥೈ, ಕುಕಿ, ಮಿಜೋಸ್, ಶಾನ್, ಚಿನ್ ಕಾಚಿಂಗ್, ಜೊ- ಚಕ್ಮಾ, ಮರ್ಮ, ತಂಚಂಗ್ಯಾ, ಚಕ್, ಪಂಖೋ, ಮ್ರು, ಮುರುಂಗ್‌ಬಾನ್, ಲುಶಾಯ್, ಖ್ಯಾಂಗ್, ಗೂರ್ಖಾ, ಸಂತಾಲ್, ಖುಮಿ, ಮೋನ್‌ಪಾ, ಶೆರ್ಡುಕ್ಪೆನ್ ಖಮ್ತಿ, ಲೆಪ್ಚಾ, ಬೌದ್ಧ, ಜೈನ ಧರ್ಮದ ಸುತ್ತಲಿನ ಸಾಂಸ್ಕೃತಿಕ, ಧಾರ್ಮಿಕ ಜೀವನ ಕೇಂದ್ರಗಳಾಗಿವೆ.

ಇಂಡೋ– ಪಾಕ್ ಗಡಿಯಲ್ಲಿ ಗುಜರಾತ್, ರಾಜಸ್ಥಾನ, ಪಂಜಾಬ್, ಜಮ್ಮು ಮತ್ತು ಕಾಶ್ಮೀರ ರಾಜ್ಯಗಳಿವೆ. ರಬಾರಿ, ಮಾಘ್ವಾರ್, ಮುಸ್ಲಿಂ, ಭಿಲ್, ಸಿದ್ಧಿ, ರಜಪೂತ್, ಮೀನಾ, ಗುರಾಸಿಯಾ ಜಾಟ್, ಗುಜ್ಜರ್, ಬಕರ್‌ವಾಲ, ಕಿನ್ನೋರ್‌ಗಳು, ಭೋಟಿಯಾಗಳು ಶೇರ್ಪಾಗಳು ಕಂಡುಬರುವರು. ದಕ್ಷಿಣ ಭಾರತದಲ್ಲಿ ತಮಿಳುನಾಡಿನ ಚೆಟ್ಟಿಯಾರ್, ಒಡಿಶಾ, ಬಂಗಾಳಿ ಸಮುದಾಯಗಳು, ಶ್ರೀಲಂಕಾ ಮತ್ತು ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ನೆಲೆಸಿರುವ ಅತಿ ಪ್ರಾಚೀನ ನಿವಾಸಿಗಳ ಸಂಸ್ಕೃತಿಯ ಸಂಬಂಧವನ್ನು ಈ ಛಾಯಾಚಿತ್ರಗಳ ಪ್ರದರ್ಶನದಲ್ಲಿ ಕಾಣಬಹುದು.



## ರೈಲುಗಳ ಮಾಹಿತಿ

***ಪ್ಯಾಸೆಂಜರ್, **ಎಕ್ಸ್‌ಪ್ರೆಸ್, ***ಸೂಪರ್ ಫಾಸ್ಟ್**



**ಭದ್ರತಾ ಸಹಾಯ ವಾಣಿ 182, ಸೇವಾ ಸಹಾಯವಾಣಿ 183, ವಿಚಾರಣೆ 139**

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಬೆಂಗಳೂರಿಗೆ | ಬೆಂಗಳೂರಿನಿಂದ | ಮೈಸೂರಿಗೆ |
|---|---|---|---|---|---|
| 22818/22817 | ಮೈಸೂರು-ಹೌರಾ***(ಸಾಪ್ತಾಹಿಕ) | ರಾತ್ರಿ12.30(ಸೋಮ) | ರಾತ್ರಿ 2.50 | ರಾತ್ರಿ 1 (ಭಾನು) | ರಾತ್ರಿ 3.45 |
| 12610/12609 | ಚೆನ್ನೈ ಎಕ್ಸ್‌ಪ್ರೆಸ್ | ಬೆಳಿಗ್ಗೆ 4.45 | ಬೆಳಿಗ್ಗೆ 7.45 | ರಾತ್ರಿ 8.10 | ರಾತ್ರಿ 11.30 |
| 16217/16218 | ಮೈಸೂರು-ಶಿರಡಿ**(ಸಾಪ್ತಾಹಿಕ) | ಬೆಳಿಗ್ಗೆ 5.30(ಸೋಮ) | ಬೆಳಿಗ್ಗೆ 8.27 | ರಾತ್ರಿ 3.30 | ಬೆಳಿಗ್ಗೆ 6 (ಗುರು) |
| 16518/16517 | ಕಣ್ಣೂರು ಎಕ್ಸ್‌ಪ್ರೆಸ್ | ಬೆಳಿಗ್ಗೆ 5.30 | ಬೆಳಿಗ್ಗೆ 8.20 | ರಾತ್ರಿ 8.30(ಸೋ, ಮಂ, ಭಾನು) | ರಾತ್ರಿ 11.05 |
| 66554/66553 | ಮೈಸೂರು-ಬೆಂಗಳೂರು* (ಮೆಮೊ) | ಬೆಳಿಗ್ಗೆ 6.10 | ಬೆಳಿಗ್ಗೆ 9:15 | ಸಂಜೆ 7.30 | ರಾತ್ರಿ 10.20 |
| 17326/17325 | ಮೈಸೂರು-ಹುಬ್ಬಳ್ಳಿ (ವಿಶ್ವಮಾನವ) | ಬೆಳಿಗ್ಗೆ 5.50 | ಬೆಳಿಗ್ಗೆ 8.55 | ಸಂಜೆ 5.45 | ರಾತ್ರಿ 8.40 |
| 16215/16216 | ಚಾಮುಂಡಿ ಎಕ್ಸ್‌ಪ್ರೆಸ್** | ಬೆಳಿಗ್ಗೆ 6.45 | ಬೆಳಿಗ್ಗೆ 9.30 | ಸಂಜೆ 6.15 | ರಾತ್ರಿ 9.05 |
| 12578/12577 | ಮೈಸೂರು- ಭಾಗಮತಿ*(ಸಾಪ್ತಾಹಿಕ) | ಬೆಳಿಗ್ಗೆ 7.20 (ಶನಿ) | ಬೆಳಿಗ್ಗೆ 9.55 | ರಾತ್ರಿ 8.55 (ಗುರು) | ರಾತ್ರಿ 11.30 |
| 16229/16230 | ಮೈಸೂರು-ವಾರಾಣಸಿ** | ಬೆಳಿಗ್ಗೆ 7.20 | ಬೆಳಿಗ್ಗೆ 9.55 | ನಸುಕು 12.15 (ಭಾನು,ಮಂಗಳ) | ನಸುಕು 2.55 |
| 16023/16024 | ಮಾಲ್ಗುಡಿ ಎಕ್ಸ್‌ಪ್ರೆಸ್ | ಬೆಳಿಗ್ಗೆ 8.25 | ಬೆಳಿಗ್ಗೆ 10.55 | ಮಧ್ಯಾಹ್ನ 1.30 | ಸಂಜೆ 4 |
| 56281/56282 | ಬೆಂಗಳೂರು- ಚಾಮರಾಜನಗರ * | ಬೆಳಿಗ್ಗೆ 9.05 | ಮಧ್ಯಾಹ್ನ 12.15 | ಮಧ್ಯಾಹ್ನ 3.30 | ಸಂಜೆ 6.40 |
| 12975/12976 | ಮೈಸೂರು-ಜೈಪುರ***(ಗುರು,ಶನಿ) | ಬೆಳಿಗ್ಗೆ 10.30 | ಮಧ್ಯಾಹ್ನ 12.55 | ಮಧ್ಯಾಹ್ನ 1(ಬುಧ, ಶುಕ್ರ) | ಸಂಜೆ 3.45 |
| 12613/12614 | ಟಿಪ್ಪು ಎಕ್ಸ್‌ಪ್ರೆಸ್*** | ಬೆಳಿಗ್ಗೆ 11.30 | ಮಧ್ಯಾಹ್ನ 2.00 | ಮಧ್ಯಾಹ್ನ 3.15 | ಸಂಜೆ 5.45 |
| 17307/17308 | ಮೈಸೂರು-ಬಾಗಲಕೋಟೆ (ಬಸವ)** | ಮಧ್ಯಾಹ್ನ 1.30 | ಸಂಜೆ 4.30 | ಬೆಳಿಗ್ಗೆ 11.15 | ಮಧ್ಯಾಹ್ನ 1.50 |
| 12008/12007 | ಶತಾಬ್ದಿ ಎಕ್ಸ್‌ಪ್ರೆಸ್*** (ಬುಧವಾರ ಹೊರತುಪಡಿಸಿ) | ಮಧ್ಯಾಹ್ನ 2.15 | ಸಂಜೆ 4.15 | ಬೆಳಿಗ್ಗೆ 11 | ಮಧ್ಯಾಹ್ನ 1 |
| 16557/16558 | ರಾಜ್ಯರಾಣಿ ಎಕ್ಸ್‌ಪ್ರೆಸ್ | ಮಧ್ಯಾಹ್ನ 2.30 | ಸಂಜೆ 5.10 | ಬೆಳಿಗ್ಗೆ 10.30 | ಮಧ್ಯಾಹ್ನ 1.30 |
| 12786/12785 | ಕಾಚಿಗುಡ ಮೈಸೂರು ಎಕ್ಸ್‌ಪ್ರೆಸ್ | ಮಧ್ಯಾಹ್ನ 2.45 | ಸಂಜೆ 4.15 | ಬೆಳಿಗ್ಗೆ 6.40 | ಬೆಳಿಗ್ಗೆ 9.45 |
| 66552/66551 | ಮೈಸೂರು-ಬೆಂಗಳೂರು(ಮೆಮೊ) | ಮಧ್ಯಾಹ್ನ 1.45 | ಸಂಜೆ 5 | ಬೆಳಿಗ್ಗೆ 9.20 | ಮಧ್ಯಾಹ್ನ 12.45 |
| 16232/16231 | ಮೈಸೂರು-ಮೈಲಾಡುತುರೈ** | ಸಂಜೆ 4.15 | ಸಂಜೆ 6.45 | ಬೆಳಿಗ್ಗೆ 5.50 | ಬೆಳಿಗ್ಗೆ 8.30 |
| 16535/16536 | ಮೈ -ಸೊಲ್ಲಾಪುರ(ಗೋಲ್‌ಗುಂಬಜ್) | ಮಧ್ಯಾಹ್ನ 3.30 | ಸಂಜೆ 6.50 | ಬೆಳಿಗ್ಗೆ 8.05 | ಬೆಳಿಗ್ಗೆ 11 |
| 16219/16220 | ಚಾಮರಾಜನಗರ-ತಿರುಪತಿ* | ಸಂಜೆ 5 | ರಾತ್ರಿ 8.15 | ಬೆಳಿಗ್ಗೆ 7.30 | ಬೆಳಿಗ್ಗೆ 10.40 |
| 16236/16235 | ಮೈಸೂರು-ಟುಟಿಕೋರಿನ್** | ಸಂಜೆ 6.05 | ರಾತ್ರಿ 9.05 | ಬೆಳಿಗ್ಗೆ 7 | ಬೆಳಿಗ್ಗೆ 9.55 |
| 16210/16209 | ಮೈಸೂರು- ಅಜ್ಮೀರ್ ** | ಸಂಜೆ 6.30 (ಮಂಗಳ, ಗುರು) | ರಾತ್ರಿ 9.30 | ರಾತ್ರಿ 3.30 (ಶುಕ್ರ, ಭಾನು) | ಬೆಳಿಗ್ಗೆ 6 |
| 16592/16591 | ಮೈಸೂರು-ಹುಬ್ಬಳ್ಳಿ (ಹಂಪಿ)** | ಸಂಜೆ 7.00 | ರಾತ್ರಿ 9.55 | ಬೆಳಿಗ್ಗೆ 6.20 | ಬೆಳಿಗ್ಗೆ 9.10 |
| 56234/56233 | ಮೈಸೂರು-ಬೆಂಗಳೂರು*(ಸಾಪ್ತಾಹಿಕ) | ಸಂಜೆ 7.10 | ರಾತ್ರಿ 10.25 | ಬೆಳಿಗ್ಗೆ 5 | ಬೆಳಿಗ್ಗೆ 8.00 |
| 22681/22682 | ಮೈಸೂರು-ಚೆನ್ನೈ*** | ರಾತ್ರಿ 8.10 (ಬುಧ) | ರಾತ್ರಿ 10.45 | ಬೆಳಿಗ್ಗೆ 5.25 (ಶುಕ್ರ) | ಬೆಳಿಗ್ಗೆ 8.00 |
| 16022/16021 | ಮೈಸೂರು-ಚೆನ್ನೈ (ಕಾವೇರಿ)** | ರಾತ್ರಿ 8.30 | ರಾತ್ರಿ 11.25 | ಬೆಳಿಗ್ಗೆ 3.50 | ಬೆಳಿಗ್ಗೆ 6.40 |
| 56263/56264 | ಮೈಸೂರು-ಬೆಂಗಳೂರು* | ರಾತ್ರಿ 11.55 | ಬೆಳಿಗ್ಗೆ 4:15 | ರಾತ್ರಿ 11.55 | ನಸುಕಿನ 4 |
| 06576/06575 | ಮೆಮು | ರಾತ್ರಿ 8.30 | ರಾತ್ರಿ 11.20 | ಸಂಜೆ 5.20 | ರಾತ್ರಿ 8.20 |

### ಮೈಸೂರು–ಅರಸೀಕೆರೆ ರೈಲುಗಾಡಿಗಳ ವೇಳಾಪಟ್ಟಿ

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಅರಸೀಕೆರೆಗೆ | ಅರಸೀಕೆರೆಯಿಂದ | ಮೈಸೂರಿಗೆ |
|---|---|---|---|---|---|
| 16206/16205 | ಮೈಸೂರು-ತಾಳಗುಪ್ಪಾ** | ಬೆಳಿಗ್ಗೆ 6.00 | ಬೆಳಿಗ್ಗೆ 8.48 | ಸಂಜೆ 6.50 | ರಾತ್ರಿ 10.15 |
| 11036/11035 | ಮೈಸೂರು-ದಾದರ್ (ಶರಾವತಿ)** | ಬೆಳಿಗ್ಗೆ 6.15 (ಭಾನು) | ಬೆಳಿಗ್ಗೆ.9.10 | ಸಂಜೆ 6.05 (ಶುಕ್ರ) | ರಾತ್ರಿ 9.40 |
| 17326/17325 | ಮೈಸೂರು- ಹುಬ್ಬಳ್ಳಿ (ಬೆಂಗಳೂರು ಮಾರ್ಗ) | ಬೆಳಿಗ್ಗೆ 6.10 | ಮಧ್ಯಾಹ್ನ 12.20 | ಮಧ್ಯಾಹ್ನ 1.15 | ರಾತ್ರಿ 8.40 |
| 56266/56265 | ಮೈಸೂರು-ಅರಸೀಕೆರೆ* | ಬೆಳಿಗ್ಗೆ 6.30 | ಬೆಳಿಗ್ಗೆ 10.40 | ಸಂಜೆ 5.30 | ರಾತ್ರಿ 9.25 |
| 16229/16230 | ಮೈಸೂರು-ಬಿಎಸ್‌ಬಿ | ಬೆಳಿಗ್ಗೆ 7.20 (ಮಂಗಳ/ಗುರು) | ಮಧ್ಯಾಹ್ನ 1.10 | ರಾತ್ರಿ 8.50 (ಸೋಮ/ಶನಿ) | ರಾತ್ರಿ 2.50 |
| 56270/56269 | ಮೈಸೂರು-ಶಿವಮೊಗ್ಗ* | ಬೆಳಿಗ್ಗೆ 10.20 | ಮಧ್ಯಾಹ್ನ 1.45 | ಮಧ್ಯಾಹ್ನ 12.30 | ಸಂಜೆ 4.30 |
| 56276/56275 | ಮೈಸೂರು-ತಾಳಗುಪ್ಪ* | ಮಧ್ಯಾಹ್ನ 2.00 | ಸಂಜೆ 6.00 | ಬೆಳಿಗ್ಗೆ 10.25 | ಮಧ್ಯಾಹ್ನ2.50 |
| 16535/16536 | ಮೈಸೂರು-ಗೋಲಗುಂಬಜ್ (ಬೆಂಗಳೂರು ಮಾರ್ಗ) | ಮಧ್ಯಾಹ್ನ 3.30 | ರಾತ್ರಿ 9.45 | ಬೆಳಿಗ್ಗೆ 4.13 | ಬೆಳಿಗ್ಗೆ 11.00 |
| 56268/56267 | ಮೈಸೂರು-ಅರಸೀಕರೆ* | ಸಂಜೆ 6.20 | ರಾತ್ರಿ 10.40 | ಬೆಳಿಗ್ಗೆ 5 | ಬೆಳಿಗ್ಗೆ 9.30 |
| 16210/16209 | ಮೈಸೂರು-ಅಜ್ಮೀರ್ ಎಕ್ಸ್‌ಪ್ರೆಸ್ | ಸಂಜೆ 6.30 (ಮಂಗಳ/ಗುರು) | ರಾತ್ರಿ 12.45 | ರಾತ್ರಿ10.55(ಸೋಮ/ಶನಿ) | ಬೆಳಿಗ್ಗೆ 6.00 |
| 12781/12782 | ಸ್ವರ್ಣಜಯಂತಿ** | ರಾತ್ರಿ 8.10 (ಶುಕ್ರ) | ರಾತ್ರಿ 11.05 | ರಾತ್ರಿ 1.40 (ಬುಧ) | ನಸುಕಿನ 4.55 |
| 17301/17302 | ಮೈಸೂರು-ಶಿವಮೊಗ್ಗ (ಧಾರವಾಡ) | ರಾತ್ರಿ 10.30 | ರಾತ್ರಿ 1.35 | ರಾತ್ರಿ 3.05 | ಬೆಳಿಗ್ಗೆ 7 |
| 56216/56215 | ಮೈಸೂರು-ಶ್ರವಣಬೆಳಗೊಳ* | ಬೆಳಿಗ್ಗೆ 7.45 | ಬೆಳಿಗ್ಗೆ 11.43(ಶ್ರ.ಗೊಳ) | ಮಧ್ಯಾಹ್ನ 2.20 (ಶ್ರ.ಗೊಳ) | ರಾತ್ರಿ 8.05 |

### ಮೈಸೂರು–ಚಾಮರಾಜನಗರ ಮಾರ್ಗ

| ಗಾಡಿ ಸಂಖ್ಯೆ | ಮೈಸೂರಿನಿಂದ | ನಂಜನಗೂಡಿಗೆ | ಚಾಮರಾಜನಗರಕ್ಕೆ | ಚಾ.ರಾಜನಗರದಿಂದ | ನಂಜನಗೂಡಿಗೆ | ಮೈಸೂರಿಗೆ |
|---|---|---|---|---|---|---|
| 56202/56281 | ಬೆಳಿಗ್ಗೆ 5 | ಬೆಳಿಗ್ಗೆ 5.39 | ಬೆಳಿಗ್ಗೆ 6.40 | ಬೆಳಿಗ್ಗೆ 7.00 | ಬೆಳಿಗ್ಗೆ 7.55 | ಬೆಳಿಗ್ಗೆ 9.00 |
| 56204/56203 | ಬೆಳಿಗ್ಗೆ 7.20 | ಬೆಳಿಗ್ಗೆ 8 | ಬೆಳಿಗ್ಗೆ 9.10 | ಬೆಳಿಗ್ಗೆ 10.40 | ಬೆಳಿಗ್ಗೆ 11.30 | ಮಧ್ಯಾಹ್ನ 12.25 |
| 56206/56205 | ಬೆಳಿಗ್ಗೆ 9.10 | ಬೆಳಿಗ್ಗೆ 9.45 ನಂಜನಗೂಡು ಮಾತ್ರ | ಬೆಳಿಗ್ಗೆ 10 | ಬೆಳಿಗ್ಗೆ 11.00 | | |
| 56220/16219 | ಬೆಳಿಗ್ಗೆ 10.30 | ಬೆಳಿಗ್ಗೆ 11.13 | ಮಧ್ಯಾಹ್ನ 12.30 | ಮಧ್ಯಾಹ್ನ 3:10 | ಮಧ್ಯಾಹ್ನ 3.40 | ಸಂಜೆ 4.55 |
| 56210/56209 | ಮಧ್ಯಾಹ್ನ 12.30 | ಮಧ್ಯಾಹ್ನ 1.10 | ಮಧ್ಯಾಹ್ನ 2.15 | ಸಂಜೆ 6 | ಸಂಜೆ 6.43 | ಸಂಜೆ 7.50 |
| 56208/56207 | ಮಧ್ಯಾಹ್ನ 2.50 | ಮಧ್ಯಾಹ್ನ 3.35 | ಸಂಜೆ 4.40 | ಸಂಜೆ 5 | ಸಂಜೆ 5.40 | ಸಂಜೆ 6.35 |
| 56282/56201 | ಸಂಜೆ 6.45 | ಸಂಜೆ 7.29 | ರಾತ್ರಿ 8.35 | ರಾತ್ರಿ 8.50 | ರಾತ್ರಿ 9.35 | ರಾತ್ರಿ 10.30 |

## ಮುನ್ನೋಟ

### ಶನಿವಾರ 24, ಆಗಸ್ಟ್

**ಕೃಷ್ಣಜನ್ಮಾಷ್ಟಮಿ ವಿಶೇಷ**

ಇಸ್ಕಾನ್ ವತಿಯಿಂದ ಶನಿವಾರ (ಆ.24) ಸಂಜೆ 6ಕ್ಕೆ ವಿದ್ವಾನ್ ದಾಸಪ್ಪ ಮತ್ತು ತಂಡದಿಂದ ವಾದ್ಯ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂಜೆ 7ಕ್ಕೆ ದುರ್ಗಾ ನೃತ್ಯ ಅಕಾಡೆಮಿ ತಂಡದಿಂದ 'ಸಂಭವಾಮಿ ಯುಗೇ ಯುಗೇ' ನೃತ್ಯ ರೂಪಕ ಪ್ರದರ್ಶನವಾಗಲಿದೆ. ವಿದುಷಿ ವಿದ್ಯಾ ಶಶಿಧರ್ ನೃತ್ಯ ನಿರ್ದೇಶನ ಮಾಡುವರು.

ಸ್ಥಳ: ಇಸ್ಕಾನ್, ಜಯನಗರ.

**ಗಾನಸಿರಿ ವೇದಾಂತ ಲಹರಿ**

ಶ್ರೀಕೃಷ್ಣಧಾಮ ವತಿಯಿಂದ ವಿಶ್ವೇಶತೀರ್ಥರ 81ನೇ, ವಿಶ್ವಪ್ರಸನ್ನ ತೀರ್ಥರ 32ನೇ ಚಾತುರ್ಮಾಸ್ಯ ಪ್ರಯುಕ್ತ ಶನಿವಾರ (ಆ.24) ಸಂಗೀತ ಕಾರ್ಯಕ್ರಮ (ಸಂಜೆ 4). ತುಳು ಮಾಧ್ವ ಮಹಿಳಾ ಮಂಡಲಿಯಿಂದ ಶ್ರೀಕೃಷ್ಣ ಕಥಾ ಆಧಾರಿತ 'ನೃತ್ಯ ರೂಪಕ' ಪ್ರದರ್ಶನ. (ಸಂಜೆ 7).

ಭಾನುವಾರ (ಆ.25) ಗಾನಸಿರಿ ವೇದಾಂತಲಹರಿಯಲ್ಲಿ ವ್ಯಾಸರಾಜರ 'ಸಂತ ವೈಭವ'. ಗಾಯನ– ಗಾರ್ಗಿಶಬರಾಯ. ಸೋಮವಾರ (ಆ.26) ಶ್ರೀಪಾದರಾಜರ 'ಸಂತ ವೈಭವ'. ಗಾಯನ– ಜಯಸಿಂಹ. ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 5.

### ಶನಿವಾರ ಮತ್ತು ಭಾನುವಾರ

**ನಾಟಕ ಪ್ರದರ್ಶನ**

ಮೈಸೂರು ಮೈಮ್ ಟೀಮ್ ತಂಡದಿಂದ ಶನಿವಾರ ಮತ್ತು ಭಾನುವಾರ (ಆ.24, 25) ಸಂಜೆ 6.45ಕ್ಕೆ 'ಕೋರ್ಟ್ ಮಾರ್ಷಲ್' ನಾಟಕವನ್ನು ಕಲಾಮಂದಿರದ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

**ನೃತ್ಯ ಆರಾಧನ**

ನಾಟ್ಯ ಕುಟೀರ ಹಾಗೂ ಕೇರಳ ಸಮಾಜದ ವತಿಯಿಂದ ಭಾನುವಾರ (ಆ. 25) ಸಂಜೆ 5.30ಕ್ಕೆ 'ನೃತ್ಯ ಆರಾಧನ' ಶಾಸ್ತ್ರೀಯ ನೃತ್ಯ ಕಾರ್ಯಕ್ರಮವನ್ನು ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.

ಮೋಹಿನಿಯಾಟ್ಟಂ ಹಾಗೂ ಭರತನಾಟ್ಯ ಸಂಗಮ ಪ್ರೇಕ್ಷಕರನ್ನು ರಂಜಿಸಲಿದೆ. ನಾಟ್ಯ ಕುಟೀರದ ಸಂಸ್ಥಾಪಕಿ ಕಲಾಮಂಡಲಂ ಸುಚಿತ್ರಾ ಅವರು ನೃತ್ಯ ಆರಾಧನೆಯ ಮುಂಚೂಣಿ ವಹಿಸಿದ್ದಾರೆ.

ಸಂಗೀತ ಮೇಳ: ಬಿಜೇಶ್ ಕೃಷ್ಣನ್, ಮೃದಂಗ: ವಿ.ವಿ.ಚಾರುದತ್, ವಯೊಲಿನ್:ಗಾನಭೂಷಣಂ ಸುರೇಶ್, ಕೊಳಲು:ಎ.ಕೆ.ರಘುನಾಥ್, ಅಜಿತ್ ಕುಮಾರ್ ಎಡಕ್ಕಾದಲ್ಲಿ ಸಹಕಾರ ನೀಡಲಿದ್ದಾರೆ.

**ನಾಟಕ ಪ್ರದರ್ಶನ**

ನಟನ ರಂಗಶಾಲೆ ವತಿಯಿಂದ ಭಾನುವಾರ (ಆ.25) ಸಂಜೆ 6.30ಕ್ಕೆ ಕೆ.ವಿ.ಅಕ್ಷರ ಅವರ 'ಸಂಸಾರದಲ್ಲಿ ಸನಿದಪ' ನಾಟಕ ಪ್ರದರ್ಶನವಾಗಲಿದೆ. ನಿರ್ದೇಶನ: ಮಂಡ್ಯ ರಮೇಶ್. ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ.

**ಶ್ರಾವಣ ಯುವ ಸಂಗೀತೋತ್ಸವ**

ಶ್ರುತಿಮಂಜರಿ ಪ್ರತಿಷ್ಠಾನ ಮತ್ತು ರೋಟರಿ ಮೈಸೂರು ಪಶ್ಚಿಮ ವತಿಯಿಂದ ಶನಿವಾರ (ಆ.24) ಸಂಜೆ 6ಕ್ಕೆ 20ನೇ ಶ್ರಾವಣ ಯುವ ಸಂಗೀತೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಚ್. ಚೆನ್ನಪ್ಪ ಉದ್ಘಾಟಿಸಲಿದ್ದಾರೆ. ರೋಟರಿ ಸಂಸ್ಥೆಯ ಅಧ್ಯಕ್ಷ ರೆಜಿನಾಲ್ಡ್ ವೆಸ್ಲಿ ಅಧ್ಯಕ್ಷತೆ ವಹಿಸುವರು. ಸಮಯ: ಸಂಜೆ 7.

ವಿದ್ವಾನ್ ಅಭಿಷೇಕ್ ಎನ್.ಶ್ರೀಧರ್ ಗಾಯನ ಪ್ರಸ್ತುತಪಡಿಸಲಿದ್ದು, ಪ್ರಣವ್ ಮಂಜುನಾಥ್ (ಪಿಟೀಲು), ಪವನ್ ಮಾಧವ್ (ಮೃದಂಗ), ಶ್ರೀನಿಧಿ ಆರ್.ಕೌಂಡಿಣ್ಯ (ಘಟ) ಸಹಕಾರ ನೀಡಲಿದ್ದಾರೆ.

ಭಾನುವಾರ (ಆ.25) ವಿದುಷಿ ಶ್ರುತಿ ಎಸ್. ಭಟ್ ಗಾಯನಕ್ಕೆ ಸಿ.ವಿ.ಶ್ರುತಿ (ಪಿಟೀಲು), ಸಚಿನ್ ಪ್ರಕಾಶ್ (ಮೃದಂಗ), ಪ್ರಜ್ವಲ್ (ಖಂಜಿರ) ಸಹಕಾರ ನೀಡಲಿದ್ದಾರೆ.

ಸೋಮವಾರ (ಆ.26) ವಿದ್ವಾನ್ ದೀಪಕ್ ಹೆಬ್ಬಾರ್ ಕೊಳಲು ನುಡಿಸಲಿದ್ದು, ಕಾರ್ತಿಕೇಯ ರಾಮಚಂದ್ರ (ಪಿಟೀಲು), ವಿನೋದ್ ಶ್ಯಾಮ್ ಆನೂರು (ಮೃದಂಗ), ಚಿದಾನಂದ (ಮೃಚ್ಚಂಗಿ) ಸಹಕಾರ ನೀಡುವರು.

ಸ್ಥಳ: ರೋಟರಿ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರ.

**ಕಿಶೋರೋತ್ಸವದಲ್ಲಿ...**

ನಾದಬ್ರಹ್ಮ ಸಂಗೀತ ಸಭಾ ವತಿಯಿಂದ ಕಿಶೋರೋತ್ಸವ ಆಯೋಜಿಸಲಾಗಿದೆ. ಶನಿವಾರ (ಆ.24) ಸಂಜೆ 5ಕ್ಕೆ ಅನಘಾ ಯೋಗಾನಂದ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ. ಪಿಟೀಲು–ಸಿ.ವಿ.ಶ್ರುತಿ, ಮೃದಂಗ– ಮಲ್ಲಾಡಿ ಅರವಿಂದ.

ಸಂಜೆ 6.20ಕ್ಕೆ ರಾಮ್ ಮಣಿಕಂಠನ್ ಅವರಿಂದ ಸಂಗೀತ ಕಾರ್ಯಕ್ರಮ.

ಸಂಜೆ 7.40ಕ್ಕೆ ಸಿ.ಎಸ್. ಕೇಶವ್ ಚಂದ್ರ ಅವರಿಂದ ಕೊಳಲು. ಪಿಟೀಲು–ಅಮೋಘ ನಾದದುರ್, ಮೃದಂಗ– ಮಲ್ಲಾಡಿ ಅರವಿಂದ.

ಭಾನುವಾರ (ಆ.25) ಬೆಳಿಗ್ಗೆ 10.30ಕ್ಕೆ ಮೇಧ ಮಂಜುನಾಥ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ. ಪಿಟೀಲು–ಪೃಥ್ವಿ ಭಾಸ್ಕರ್, ಮೃದಂಗ– ನಂದನ್ ಕಶ್ಯಪ್.

ಬೆಳಿಗ್ಗೆ 11.50ಕ್ಕೆ ಯೋಗ ಅದ್ವೈತ ವೇತುರಿ ಅವರಿಂದ ಸಂಗೀತ ಕಾರ್ಯಕ್ರಮ. ಸಂಜೆ 5ಕ್ಕೆ ಎಂ.ಪಿ. ಕೃತಿಕ್ ಕೌಶಿಕ್ ಅವರಿಂದ ಸಂಗೀತ ಕಾರ್ಯಕ್ರಮ. ಘಟಂ– ಶಮಿತಾ ಗೌಡ, ಮೃದಂಗ– ನಂದನ್ ಕಶ್ಯಪ್.

ಸಂಜೆ 6.20ಕ್ಕೆ ಎಂ. ನಿಶಾಂತ್ ಅವರಿಂದ ಸಂಗೀತ ಕಾರ್ಯಕ್ರಮ. ಸ್ಥಳ: ಸಂಗೀತ ಕಲಾನಿಧಿ ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ.

### ಸಹಜ ರಂಗ ತರಬೇತಿ ಶಿಬಿರ



ಸಹಜರಂಗ ಹಾಗೂ ನಿರಂತರ ಫೌಂಡೇಷನ್ ವತಿಯಿಂದ ಶನಿವಾರ (ಆ.24) ರಂಗ ತರಬೇತಿ ಶಿಬಿರ ಆಯೋಜಿಸಲಾಗಿದೆ.

ರಂಗ ನಿರ್ದೇಶಕ ಪ್ರಕಾಶ ಗರೂಡ, ಸಂಗೀತ ನಿರ್ದೇಶಕ ಶ್ರೀನಿವಾಸ್ ಭಟ್, ಗಾಂಧಿ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ಎಂ.ಎಸ್.ಶೇಖರ್ , ನಿರಂತರದ ಪ್ರಸಾದ್ ಕುಂದೂರ್ ಭಾಗವಹಿಸಲಿದ್ದಾರೆ.

ಸ್ಥಳ: ಗಾಂಧಿ ಭವನ, ಮಾನಸ ಗಂಗೋತ್ರಿ. ಮಾಹಿತಿಗೆ: 99802 73167

### ಸಿರಿಮ ಭರತನಾಟ್ಯ ರಂಗಪ್ರವೇಶ



ಸಕಲಕಲಾ ಸಿರಿ ವಿದ್ಯಾಪೀಠ ಚಾರಿಟಬಲ್ ಟ್ರಸ್ಟ್ ಹಾಗೂ ಸಿರಿ ಡಾನ್ಸ್ ಅಕಾಡೆಮಿ ವತಿಯಿಂದ ಭಾನುವಾರ (ಆ.25) ಸಂಜೆ 5.30ಕ್ಕೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಸಿರಿಮ ಬಿ.ರಾಜು ಅವರು ಭರತನಾಟ್ಯ ರಂಗಪ್ರವೇಶ ಮಾಡಲಿದ್ದಾರೆ. ಜೆ.ಕೆ.ಮೈದಾನದ ಎಂಎಂಸಿ ಸಭಾಂಗಣದಲ್ಲಿ ಸಮಾರಂಭ ನಡೆಯಲಿದೆ.

### 26ರಂದು ಪ್ರಶಸ್ತಿ ಪ್ರದಾನ

ಗಳಗನಾಥ ಮತ್ತು ನಾ.ಶ್ರೀ. ರಾಜಪುರೋಹಿತ ಪ್ರತಿಷ್ಠಾನ ಹಾವೇರಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಸೋಮವಾರ (ಆ.26) 2018ರ ಗಳಗನಾಥ ಮತ್ತು ನಾ.ಶ್ರೀ. ರಾಜಪುರೋಹಿತ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಗಳಗನಾಥ ಪ್ರಶಸ್ತಿಯನ್ನು ಹಿರಿಯ ಕಾದಂಬರಿಕಾರ ಬಿ.ಎಲ್.ವೇಣು ಹಾಗೂ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಡಾ.ಎನ್. ಕೆ.ಲೋಲಾಕ್ಷಿ ಸ್ವೀಕರಿಸಲಿದ್ದಾರೆ.

ವಿಶ್ರಾಂತ ಪ್ರಾಧ್ಯಾಪಕ ಡಾ.ಎ.ವಿ. ನರಸಿಂಹಮೂರ್ತಿ, ಪ್ರಾಧ್ಯಾಪಕ ಎನ್.ಎಸ್. ರಂಗರಾಜು ನಾ.ಶ್ರೀ. ರಾಜಪುರೋಹಿತ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮನು ಬಳಿಗಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕುಲಪತಿ ಜಿ.ಹೇಮಂತ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಜಾನಕಿ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಗಳಗನಾಥ ಮತ್ತು ನಾ.ಶ್ರೀ. ರಾಜಪುರೋಹಿತ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ದುಷ್ಯಂತ ನಾಡಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಬೆಳಿಗ್ಗೆ 10.30.

# ದರ್ಶನವು ಸತ್ತಮೇಲೋ, ಮೊದಲೋ?

**ಡಾ.ಕೆ.ಎಸ್. ಕಣ್ಣನ್**

ಪ್ರತಿಕ್ಷಣವೂ ನಾವು ಪ್ರಪಂಚವನ್ನು ಅರಸುತ್ತಲೇ ಇರುತ್ತೇವೆ. ಸುಖವೆಲ್ಲಿದೆಯೆಂಬ ಪ್ರಶ್ನೆ ನಮಗೆ ಸದಾ ಬರುತ್ತಿರುತ್ತದೆ. ನಮಗೆ ಸುಖವು ಸಿಕ್ಕೇ ಇಲ್ಲವೆಂದೂ ಹೇಳಲಾಗದು. ಸಿಕ್ಕಿದೆ, ಸಿಗುತ್ತಿದೆ – ಎಂದು ಹೇಳಲೇಬೇಕಾಗುತ್ತದೆ.

ಸುಂದರವಾದ ದೃಶ್ಯವನ್ನು ನೋಡಿದರೆ ಕಣ್ಣಿಗೆ ಸುಖ. ಮುದ್ದಾದ ಮಗುವಿನ ಮೊಗವನ್ನು ಕಂಡರೂ ನಮ್ಮ ಕಂಗಳಿಗೆ ಸುಖವೇ. ಸಾರಾಂಶವಾಗಿ ಒಳ್ಳೆಯ ರೂಪದಿಂದ ಕಣ್ಣಿಗೆ ಸುಖ. ಹಾಗೆಯೇ ಒಳ್ಳೆಯ ಸಂಗೀತದಿಂದ ಕಿವಿಗೆ ಸುಖ. ಅಂದರೆ, ಒಳ್ಳೆಯ ಶಬ್ದದಿಂದ ಕಿವಿಗೆ ಸುಖ. ಹಾಗೆಯೇ ಸ್ಪರ್ಶ-ರಸ-ಗಂಧಗಳಿಂದ ಚರ್ಮ-ನಾಲಿಗೆ-ನಾಸಿಕಗಳಿಗೂ ಸುಖ.

ಮೇಲೆ ಹೇಳಿದುದು ಐದು ಇಂದ್ರಿಯಗಳ ಸುಖಗಳ ಬಗ್ಗೆ. ಸುಖದ ಹಸಿವು ಇಂದ್ರಿಯಗಳಿಗೆ ಮಾತ್ರವಲ್ಲ, ಮನಸ್ಸು-ಬುದ್ಧಿಗಳಿಗೂ ಹಸಿವುಂಟು. ಒಳ್ಳೆಯ ಕಲೋಪಾಸನೆಯಿಂದ, ಕ್ಲಿಷ್ಟವಾದ ಸಮಸ್ಯೆಯನ್ನು ಬಗೆಹರಿಸುವುದರಿಂದ ಮನೋ-ಬುದ್ಧಿಗಳಿಗೂ ತೃಪ್ತಿಯಾಗುವುದು. ತೃಪ್ತಿಯೆಂದರೇನು? ಎಲ್ಲೆಲ್ಲಿ ಹಸಿವೋ ಅಲ್ಲಲ್ಲಿ ತಕ್ಕ ತಕ್ಕ ಆಹಾರವು ದೊರೆಯುತ್ತಿರುವುದು.

ಶ್ರೀರಂಗಮಹಾಗುರುಗಳು ಇವಿಷ್ಟನ್ನೂ ಹೇಳಿ 'ದೇಹೇಂದ್ರಿಯ ಮನೊಬುದ್ಧಿಗಳಲ್ಲದೆ, ಜೀವವೆಂಬುದೂ ಒಂದುಂಟಪ್ಪಾ. ಆ ಜೀವಕ್ಕೂ ಹಸಿವಿರುವುದು. ಜೀವನಿಗೆ ದೇವನೇ 'ಆಹಾರ'!. ಆತ್ಮದ ಹಸಿವನ್ನು ಪರಮಾತ್ಮನೇ ಹಿಂಗಿಸುವುದು; ಆತ್ಮತೃಪ್ತಿಯು ಪರಮಾತ್ಮ ದರ್ಶನದಿಂದಲೇ' ಎಂದು ಪ್ರತಿಪಾದಿಸುತ್ತಿದ್ದರು.

ಆದರೆ ದೇವ ದರ್ಶನವಾಗುವುದು ಸತ್ತಮೇಲೇ – ಎಂದು ಹಲವರ ಎಣಿಕೆ. ಶ್ರೀರಂಗ ಮಹಾಗುರುಗಳು ಇದನ್ನು ಒಪ್ಪುತ್ತಿರಲಿಲ್ಲ.

"ಹಾಗಲ್ಲಪ್ಪಾ, ಈ ಜನ್ಮದಲ್ಲೇ ದೇವನನ್ನು ಕಾಣುವುದು ಶಕ್ಯವಪ್ಪಾ" ಎಂದು ಬೋಧಿಸುತ್ತಿದ್ದರು. ಅದು ಅವರ ಅನುಭವದ ಮಾತಾಗಿತ್ತು. ಅದಕ್ಕೆ ಬೇರೆ ಪುರಾವೆಗಳೂ ಉಂಟೇ. ಈಚಿನ ಇತಿಹಾಸದಲ್ಲಿ ತ್ಯಾಗರಾಜರು-ರಮಣಮಹರ್ಷಿಗಳು-ರಾಮಕೃಷ್ಣ ಪರಮಹಂಸರು – ಇವರುಗಳೆಲ್ಲರೂ ಇದಕ್ಕೆ ಸಾಕ್ಷಿಗಳೇ. ಭಗವಂತನನ್ನು ನಾವು ಕಂಡೆವು, ಆಹಾ, ನಾವು ಕಂಡೆವು! (ಕಂಡೋಂ ಕಂಡೋಂ) - ಎಂದು ಪ್ರಾಚೀನ ಇತಿಹಾಸದ ಆಳ್ವಾರುಗಳೂ ಉದ್ಗರಿಸಿದ್ದರು.

ದೋಪನಿಷತ್ತುಗಳಲ್ಲೂ ಈ ಬಗೆಯ ಉದ್ಗಾರಗಳಿವೆ. 'ಆ ಮಹಾಪುರುಷನನ್ನು ನಾನು ಅರಿತಿದ್ದೇನೆ' (ವೇದಾಹಮೇತಂ ಪುರುಷಂ ಮಹಾಂತಂ) ಎಂಬುದು ಋಷಿಯ ಮಾತೇ.

'ಇಲ್ಲಿಯೇ ಕಂಡಿರೋ, ಅದೋ ಸತ್ಯವುಂಟು!' – 'ಇಹ ಚೇದ್ ಅವೇದೀತ್ ಅಥ ಸತ್ಯಮ್ ಅಸ್ತಿ' ಎಂದು ಕೇನೋಪನಿಷತ್ತು ಸಾರಿದೆ. ಅಷ್ಟೇ ಅಲ್ಲ. 'ಇಲ್ಲಿ ತಿಳಿಯಲಿಲ್ಲವೋ ಮಹಾ ನಷ್ಟವೇ!' – ಎಂದೂ ಎಚ್ಚರಿಸಿದೆ.

ಪ್ರಧಾನವಾಗಿ ಸ್ವಾನುಭವದ ಬಲದ ಮೇಲೂ, ಜೊತೆಗೆ ಬೇರೆ ಉಪನಿಷತ್ತುಗಳಲ್ಲೂ ಬರುವ ಇದೇ ಅರ್ಥದ ಮಾತುಗಳನ್ನು ಬಳಸಿಕೊಂಡೂ, ಶ್ರೀರಂಗಮಹಾಗುರುಗಳು ತತ್ತ್ವಪ್ರತಿಪಾದನೆ ಮಾಡುತ್ತಿದ್ದರು.